# ಬಿಳಿ ಹೂಗಳ ಕತ್ತಲೆ ಜಗತ್ತು



ಹೆನಗೆರೆ ಹೂವಿನ ಮಕರಂದವನ್ನು ರಾತ್ರಿ ಹೊತ್ತಿನಲ್ಲಿ ಹೀರುತ್ತಿರುವ ಬಾಸ್ಟಿಲ್ಲಾ ಪತಂಗ
ಚಿತ್ರ: ಶ್ರೀಲೋಕ ಬಿ.ಎಸ್.

**ವಿಶಿಷ್ಟ ವರ್ಣ ಸಂಯೋಜನೆಯನ್ನು ಒಳಗೊಂಡ ಪ್ರಕೃತಿಯ ಬಹುರೂಪ ಮಾನವನ ಪಾಲಿಗೆ ನಿಗೂಢ. ತಮ್ಮ ಉಳಿವಿಗಾಗಿ ನಿಸರ್ಗದ ಬಣ್ಣಗಳನ್ನು ನೆಚ್ಚಿಕೊಂಡ ಸಸ್ಯ, ವನ್ಯಪ್ರಭೇದಗಳ ವಿಕಾಸವೂ ಆಸಕ್ತಿದಾಯಕ. ಬಿಳಿ ಹೂಗಳ ಕತ್ತಲೆಯ ನಂಟು ಕೂಡ ಅಂಥ ವಿಸ್ಮಯಕಾರಿ ಸಂಗತಿಗಳಲ್ಲೊಂದು.**

■ ಸವಿನಯ ಮಾಲ್ವೆ

ಬಣ್ಣಗಳೆಂದರೆ ಸಹಜವಾಗಿ ಕಾಮನಬಿಲ್ಲಿನ ಏಳು ಬಣ್ಣಗಳು ನೆನಪಾಗುತ್ತವೆ. ಬಣ್ಣದಂಗಡಿಯವರ ಹತ್ತಿರ ಕೇಳಿ– ಅವರು, ಏಳರಿಂದಾಚೆಯೂ ನೂರಾರು ಸಂಯೋಜಿತ ಬಣ್ಣಗಳನ್ನು ತೋರಿಸಬಲ್ಲರು. ಈ ಏಳರದ್ದೇ ಆದ ಅದೆಷ್ಟೋ ಗಾಢ, ತಿಳಿ ಛಾಯೆಯಿರುವ ವೈವಿಧ್ಯಮಯ ಬಣ್ಣಗಳನ್ನು ನೋಡಬಹುದು. ಹಾಗಿದ್ದರೆ, ಇಷ್ಟೆಲ್ಲಾ ವೈವಿಧ್ಯವಿರುವ ಬಣ್ಣಗಳೆಂದರೆ ಏನಿರಬಹುದು? ವಸ್ತುಗಳ ಮೇಲ್ಮೈ ಹೊಳಪೇ? ಮೆರುಗೇ? ಬರಿದೇ ದ್ರವ್ಯದ ಲೇಪನವೇ?

ಎಲ್ಲದಕ್ಕೂ ವ್ಯಾಖ್ಯಾನ ನೀಡುವ ಗೂಗಲ್‌ನ **'What is colour?'** ಅಂತ ಪ್ರಶ್ನಿಸಿ ನೋಡಿ, ನೂರಾರು ವ್ಯಾಖ್ಯಾನಗಳನ್ನು ಕೊಡುತ್ತದೆ. ಅದರಲ್ಲೇನು ವಿಶೇಷ ಅನಿಸಬಹುದು ನಿಮಗೆ! ಆದರೆ ಹೀಗೆ ಕೇಳಿದಾಗ ಅದರಲ್ಲಿನ ಒಂದು ವ್ಯಾಖ್ಯಾನ ಬಹಳ ಆಸಕ್ತಿದಾಯಕ ಅನ್ನಿಸಿದ್ದು ನಿಜ. ಅದೇನೆಂದರೆ, 'ಬಣ್ಣವು ನಮ್ಮ ಕಣ್ಣುಗಳು ಗಮನಿಸುವ, ಸ್ವೀಕರಿಸುವ ಮತ್ತು ಪ್ರಕ್ರಿಯೆಗೊಳಿಸುವ ಮಾಹಿತಿ'. ವಸ್ತುವಿನ ಮೇಲೆ ಬೆಳಕು ಬೀಳುವ ಪ್ರಕ್ರಿಯೆಯಲ್ಲಿ ಒಂದಷ್ಟು ಬೆಳಕು ಪ್ರತಿಫಲನಗೊಳ್ಳುತ್ತದೆ. ನಮ್ಮ ಕಣ್ಣುಗಳು ಈ ಪ್ರತಿಫಲಿತ ಭಾಗವನ್ನು ಬಣ್ಣವಾಗಿ ಗ್ರಹಿಸುತ್ತವೆ. ಇದು ಬಣ್ಣಗಳ ಹಿಂದಿರುವ ವಿಜ್ಞಾನ. ಇದನ್ನೇ ಆ ವಸ್ತುವಿನಿಂದ ನಮ್ಮ ಕಣ್ಣುಗಳು ಸ್ವೀಕರಿಸುವ ಮೊದಲ ಮಾಹಿತಿ ಎನ್ನಬಹುದು.

ಹಸುರೆಂದರೆ ಕಾಡು, ಶುದ್ಧತೆ, ಸರಳತೆಗೆ ಬಿಳಿ, ಪ್ರೀತಿ ನಿವೇದನೆಗೆ ಕೆಂಪು ಗುಲಾಬಿ ಎನ್ನುವುದೆಲ್ಲ ಬಣ್ಣಗಳ ಹಿಂದಿನ ಸಂಕೇತಗಳೇ ಆದರೂ, ಅವು ಕೊಡುವ ಸಂದೇಶ ಪರಿಣಾಮಕಾರಿ. 'ಬೆಳ್ಳಗಿರುವುದೆಲ್ಲ ಹಾಲಲ್ಲ', 'ಸರ್ವ ಬಣ್ಣವನ್ನು ಮಸಿ ನುಂಗಿತ್ತು', 'ಕಾಮಾಲೆ ಕಣ್ಣಿಗೆ ಕಾಣೋದೆಲ್ಲಾ ಹಳದಿ'– ಹೀಗೆ ಬಣ್ಣಗಳನ್ನು ರೂಪಕವಾಗಿ ಬಳಸಿದ ಗಾದೆ, ನಾಣ್ನುಡಿಗಳು ನೈತಿಕ ಮೌಲ್ಯಗಳನ್ನು ಕಟ್ಟಿಕೊಡುತ್ತವೆ ಮತ್ತು ಅವುಗಳೆಲ್ಲದರಲ್ಲೂ ಬಣ್ಣಗಳ ರೂಪಕ ಪ್ರಭಾವಶಾಲಿಯಾಗಿ ಬಳಕೆಯಾಗಿದೆ.

ಬಣ್ಣಗಳು ವನ್ಯಜೀವಿಗಳಿಗೆ ಭಾಷೆಯಿದ್ದಂತೆ. ಕುಂತಲ್ಲೇ ಮಾತು/ಆಹ್ವಾನಗಳನ್ನು ದಾಟಿಸುವ ಮೆಸೆಂಜರ್. ಕೆಳಗಿರುವ ಸಸ್ಯ, ದೂರದಲ್ಲೆಲ್ಲೋ ಹಾರುವ ಜೇನುನೊಣಗಳನ್ನು, ಚಿಟ್ಟೆ–ಪತಂಗಗಳನ್ನು ಮೌಕಿಕ ಸಂವಹನವಿಲ್ಲದೇ ತನ್ನ ಬಳಿ ಬರುವಂತೆ ಮಾಡುವಲ್ಲಿ ನಿರ್ದಿಷ್ಟ ಬಣ್ಣಗಳ ಕೊಡುಗೆ ಅಪಾರ. ಪ್ರತೀ ಹೂವೂ ಮತ್ತೊಂದು ಹೂವಿಗಿಂತಲೂ ಭಿನ್ನವಾಗಿ ಕಾಣಿಸಿಕೊಳ್ಳಲು ಬಣ್ಣವೋ, ವಾಸನೆಯೋ, ವಿಶಿಷ್ಟ ಆಕಾರವೋ, ಬೇಕೇ ಬೇಕು.